## ನಿಮ್ಮೊಡನೆ

# ಹವಾಮಾನ ವೈಪರೀತ್ಯಕ್ಕೆ ನಾವೇ ಕಾರಣ!

ಹವಾಮಾನ ವೈಪರೀತ್ಯಕ್ಕೆ ಬಹುಬೇಗ ಬಲಿಯಾಗುವುದು ಮಕ್ಕಳು. ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ, ಐದು ವರ್ಷದೊಳಗಿನ ಮಕ್ಕಳಿಗೆ ಬರುವ ಶೇಕಡಾ 88ರಷ್ಟು ರೋಗಗಳಿಗೆ ಹವಾಮಾನ ವೈಪರೀತ್ಯವೇ ಕಾರಣ.

ಈ ವಾರವಿಡೀ ಹವಾಮಾನ ವೈಪರೀತ್ಯದ ಚರ್ಚೆ ನಡೆಯುತ್ತಿದೆ. ವರ್ಷದಿಂದ ವರ್ಷಕ್ಕೆ ಏರುತ್ತಿರುವ ಜಾಗತಿಕ ತಾಪಮಾನಕ್ಕೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಜಗತ್ತಿನ ಎಲ್ಲ ದೇಶಗಳೂ ಒಟ್ಟು ಸೇರಿ ಪ್ಯಾರಿಸ್ ಶೃಂಗಸಭೆ ನಡೆದಿದೆ. ಭೂಪ್ರದೇಶಗಳನ್ನು ಗಡಿ ಗುರುತಿಸಿ ಹಂಚಿಕೊಂಡಂತೆ, ವಾಯುಪ್ರದೇಶಗಳನ್ನೂ ದೇಶಗಳು ಪರಸ್ಪರ ಹಂಚಿಕೊಂಡಿವೆ. ಆದರೆ ವಾಯುಮಂಡಲದಲ್ಲಿ ಸಂಚರಿಸುವ ಗಾಳಿಗಾಗಲೀ, ಶಾಖಕ್ಕಾಗಲೀ ಯಾವೊಂದು ದೇಶವೂ ಬೇಲಿ ಹಾಕುವಂತಿಲ್ಲವಲ್ಲ! ಜಾಗತಿಕ ಹವಾಮಾನ ವೈಪರೀತ್ಯ ದೇಶಗಳ ಗಡಿಗಳನ್ನು ಮೀರಿ ಬೆಳೆದಿರುವ ವಿದ್ಯಮಾನ. ಈ ಒಂದು ವಿಷಯದಲ್ಲಾದರೂ 'ಜಗತ್ತಿನ ಜನರೆಲ್ಲರೂ ಒಂದೇ' ಎಂಬ ಭಾವನೆಯಿಂದ ಕಾರ್ಯಾಚರಣೆ ಮಾಡುವುದು ಅನಿವಾರ್ಯ. ಇದು ಮನುಕುಲದ ಉಳಿಗಾಲದ ಪ್ರಶ್ನೆ.

ಹಾಗೆ ನೋಡಿದರೆ, ಇದು ಸ್ಥಳೀಯ ಸಮಸ್ಯೆಯೂ ಹೌದು. ಇಲ್ಲಿ ಪ್ರತಿಯೊಬ್ಬರೂ ವೈಯಕ್ತಿಕ ಮಟ್ಟದಲ್ಲಿ ಹವಾಮಾನ ಕೆಡಲು ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಸುಮ್ಮನೆ ನಮ್ಮ ಮನೆಗಳ ಸುತ್ತವೇ ನೋಡಿ. ಎಷ್ಟೊಂದು ತ್ಯಾಜ್ಯ ವಸ್ತುಗಳನ್ನು ಸುತ್ತಮುತ್ತ ಹರಡಿಕೊಂಡಿದ್ದೇವೆ! ಎಷ್ಟೊಂದು ಕಡೆ ಪ್ಲಾಸ್ಟಿಕ್ ಕಸಕ್ಕೆ ಬೆಂಕಿ ಹಚ್ಚಿ ವಾತಾವರಣ ಮಲಿನಗೊಳಿಸುತ್ತಿದ್ದೇವೆ! ಪ್ರತಿದಿನ ಅಗತ್ಯವೇ ಇಲ್ಲದಿದ್ದರೂ ಎಷ್ಟೊಂದು ಪೆಟ್ರೋಲ್ ಮತ್ತು ಡೀಸೆಲ್ ಉರಿಸಿ ವಾತಾವರಣಕ್ಕೆ ಹೊಗೆ ಬಿಡುತ್ತಿದ್ದೇವೆ! ಹಿಂದೆಲ್ಲ ಒಂದು ಕಿ.ಮೀ ದೂರಕ್ಕೂ ಕಾಲ್ನಡಿಗೆಯಲ್ಲೇ ಓಡಾಡುತ್ತಿದ್ದೆವು. ಇವತ್ತು ಫರ್ಲಾಂಗ್ ದೂರದಲ್ಲಿರುವ ಗೂಡಂಗಡಿಗೂ ಓಡಾಡಲು ಬೈಕ್ ಬೇಕು! ಪರಿಸರ ರಕ್ಷಣೆಗಾಗಿ ಬೈಕ್ ರಾಲಿ ನಡೆಸುತ್ತೇವೆ! ಆರೋಗ್ಯ ಕಾಪಾಡಲು ಪಾರ್ಕ್‌ನಲ್ಲಿ ಮಾತ್ರ ವಾಕಿಂಗ್ ಮಾಡುತ್ತೇವೆ! ಪೆಟ್ರೋಲಿಯಂ ಮತ್ತು ಕಲ್ಲಿದ್ದಲು ಉತ್ಪನ್ನಗಳು ಉರಿದಷ್ಟೂ ಭೂಮಿಯ ಧಗೆ ಹೆಚ್ಚುತ್ತದೆ. ಜಾನುವಾರುಗಳು ಮತ್ತು ಕುಕ್ಕುಟಗಳ ಸಂಖ್ಯೆ ಹೆಚ್ಚಾದಷ್ಟೂ ಇಂಗಾಲದ ಡೈಆಕ್ಸೈಡ್ ಮತ್ತು ಮಿಥೇನ್‌ನಂತಹ ಹಸಿರುಮನೆ ಅನಿಲಗಳು ವಾತಾವರಣ ತುಂಬುತ್ತವೆ. ಈ ಅನಿಲಗಳು ಶಾಖವನ್ನು ಹಿಡಿದಿಟ್ಟುಕೊಂಡು ನಿಧಾನಕ್ಕೆ ಉಷ್ಣಾಂಶ ಏರಿಸುತ್ತವೆ.

ಕರ್ನಾಟಕದಲ್ಲಿ ಒಂದೆಡೆ ಐದಾರು ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಸುರಿಯುತ್ತಿದ್ದರೆ, ಇನ್ನೊಂದೆಡೆ 14ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಬರಗಾಲ ತಾಂಡವವಾಡುತ್ತಿದೆ. ಬಿಸಿಲಿನ ಧಗೆಯ ಹೆಚ್ಚಳ, ಶುದ್ಧ ಗಾಳಿಯ ಕೊರತೆ, ಸೋಂಕು ರೋಗಗಳ ಹೆಚ್ಚಳ, ಆಹಾರ ಮತ್ತು ನೀರಿನ ಮಾಲಿನ್ಯ– ಎಲ್ಲವೂ ಒಂದಕ್ಕೊಂದು ಸಂಬಂಧ ಹೊಂದಿವೆ. ವಾತಾವರಣದಲ್ಲಿ ಕಾರ್ಬನ್ ಡೈಆಕ್ಸೈಡ್ ಹೆಚ್ಚಿದರೆ ಹೊಲದಲ್ಲಿ ಮೊಳಕೆಯೊಡೆಯುವ ಧಾನ್ಯಗಳ ಗುಣಮಟ್ಟ ಕುಂಠಿತವಾಗುತ್ತದೆ. ಗೋಧಿ, ಅಕ್ಕಿ, ಬಾರ್ಲಿಗಳೆಲ್ಲವನ್ನು ಮಕ್ಕಳಿಗೆ ಕಾಲಕಾಲಕ್ಕೆ ಸರಿಯಾಗಿ ತಿನ್ನಿಸಿದರೂ, ಅವುಗಳಲ್ಲಿ ಪ್ರೊಟೀನ್ ಅಂಶವೇ ಇಲ್ಲದಿದ್ದರೆ ಏನು ಮಾಡಲಾದೀತು?

ಹವಾಮಾನ ವೈಪರೀತ್ಯಕ್ಕೆ ಬಹುಬೇಗ ಬಲಿಯಾಗುವುದು ಮಕ್ಕಳು. ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ, ಐದು ವರ್ಷದೊಳಗಿನ ಮಕ್ಕಳಿಗೆ ಬರುವ ಶೇಕಡಾ 88ರಷ್ಟು ರೋಗಗಳಿಗೆ ಹವಾಮಾನ ವೈಪರೀತ್ಯವೇ ಕಾರಣ. ಬಿಸಿಗಾಳಿಯ ಹೊಡೆತಕ್ಕೆ ಸಾಂಕ್ರಾಮಿಕ ರೋಗ ಬಂದು ಸಾಯುವ ಒಂದು ವರ್ಷದ ಕೆಳಗಿನ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ವಾರವಿಡೀ ಶೀತಗಾಳಿ ಹೊಡೆಯುತ್ತಿದ್ದರೆ ಬೆಂಗಳೂರಿನಂತಹ ನಗರಗಳಲ್ಲಿ ವಾಸಿಸುತ್ತಿರುವ ಎಳೆಯ ಮಕ್ಕಳ ಉಸಿರಾಟದ ತೊಂದರೆ ಹೆಚ್ಚಾಗುತ್ತದೆ. ಅಸ್ತಮಾ ಕಾಡುವ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯೂ ಕುಂಠಿತಗೊಳ್ಳುತ್ತದೆ. ಶುದ್ಧ ನೀರು ಮತ್ತು ಗಾಳಿಯ ಕೊರತೆಯಿಂದಾಗಿ ವಿಶ್ವದಲ್ಲಿ ಪ್ರತಿ ವರ್ಷ 15 ಲಕ್ಷ ಮಕ್ಕಳು ಸಾವನ್ನಪ್ಪುತ್ತಿದ್ದಾರೆ ಎಂದು ಅಂಕಿ–ಅಂಶ ಹೇಳುತ್ತಿದೆ. ಮಕ್ಕಳ ಸಾವಿಗೆ ಮಾಲಿನ್ಯ ಕುರಿತ ನಮ್ಮ ಜೀವನಶೈಲಿಯ ನಿರ್ಲಕ್ಷ್ಯದ ಧೋರಣೆಯೂ ಒಂದು ಪ್ರಮುಖ ಕಾರಣವಾಗುತ್ತಿದೆ.

ಎಲ್ಲೋ ದೂರದ ಪ್ಯಾರಿಸ್‌ನಲ್ಲಿ ಕುಳಿತು ರಾಜಕಾರಣಿಗಳು ಸಭೆ ಮಾಡುತ್ತಾರೆಂದು ಅವಜ್ಞೆ ಬೇಡ. ಇಡೀ ಭೂಮಿಗೊಂದೇ ಪರಿಸರ. ನಮ್ಮ ರಸ್ತೆಯ, ನಮ್ಮ ಊರಿನ, ನಮ್ಮ ನಗರದ ಕಸಗಳನ್ನು ಕೊಳೆಯದಂತೆ ನೋಡಿಕೊಳ್ಳೋಣ. ಮನೆಯ ಕಸವನ್ನೇ ಬಳಸಿ ಮನೆಯ ಮೇಲಿನ ತಾರಸಿ ತೋಟಕ್ಕೆ ಗೊಬ್ಬರ ಮಾಡಿಕೊಳ್ಳುವ ಸಾವಿರಾರು ಮಂದಿ ಇದ್ದಾರೆ. ಸಾವಯವ ಗೊಬ್ಬರ ಬಳಸಿ ಆರೋಗ್ಯಕರ ದವಸಧಾನ್ಯ ಬೆಳೆಯುವ ಲಕ್ಷಾಂತರ ರೈತರಿದ್ದಾರೆ. ಅದು ಕೇವಲ ಅವರ ಕೆಲಸವಷ್ಟೇ ಎಂದು ನಾವೇಕೆ ನಿರ್ಲಕ್ಷ್ಯ ತೋರಬೇಕು? ನಮ್ಮ ಪಾಲಿನ ಹೊಣೆಗಾರಿಕೆಗಳನ್ನು ಏಕೆ ಮರೆಯಬೇಕು?

■ ಬಿ.ಎಂ.ಹನೀಫ್



ಈಶ್ವರ್